ಮತ್ತೆ ಒತ್ತಾಸೆಯಾಗುವ ಆಕಾಂಕ್ಷೆ ತಲೆಯೆತ್ತಿತು. 'ಸರಿ, ನೀನು ನನ್ನದೊಂದು ಮಾತು ನಡೆಸಿಕೊಟ್ರೆ ಅಳಿಸಿಬಿಡತೀನಿ.' 'ಏನು ಅಂಕಲ್...', 'ನೀನು ನನ್ನೊಂದಿಗೆ ಒಂದು ರಾತ್ರಿ ಕಳೀಬೇಕು.' 'ಅಂಕಲ್... ಏನ್ಹೇಳ್ತಿದೀರ?' ಸಿಟ್ಟಿತ್ತು ದನಿಯಲ್ಲಿ. 'ಮಂಜರಿ, ನೀನು ಮಾಡಿದ್ದು ಕೊಲೆ. ಒಂದೇ ಒಂದ್ಸಾರಿ ನನ್ನೊಂದಿಗೆ ಕಳಿ. ನಂತ್ರ ನಾನು ನಿನ್ನ ತಂಟೆಗೇ ಬರೋದಿಲ್ಲ. ಮಾತೂ ಆಡಲ್ಲ, ಭೆಟ್ಟೀನೂ ಆಗಲ್ಲ...' ಅಂದ. ಅವಳು ಪಕ್ಕದ ಕುರ್ಚಿಯ ಮೇಲೆ ಕುಸಿದು ಕುಳಿತಳು. ಇದ್ದ ಮತ್ತೊಂದು ಕುರ್ಚಿಯ ಮೇಲೆ ಮೊಬೈಲು ಹಿಡಿದು ಕೂತ ಪದ್ಮನಾಭ.

ಸಮಯ ಕಳೆಯುತ್ತಿತ್ತು. ಅರ್ಧಗಂಟೆ ಮೌನದಲ್ಲಿ ಕಳೆದ ಮೇಲೆ, 'ಆಗಲಿ, ಆದ್ರೆ ಒಂದೇಸಾರಿ. ನೀವು ಆ ವಿಡಿಯೊ ಅಳಿಸ್ತಾಕತೀರಿ ಅಲ್ವಾ?' ದನಿ ಕ್ಷೀಣಿಸಿತ್ತು. ತಲೆಯಾಡಿಸಿದ. 'ಸರಿ... ಯಾವಾಗ?' ಕೇಳಿದಳು. 'ಈಗಲೇ ಆಗಲಿ' ಅಂದವ ಎದ್ದು ಮಲಗುವ ಕೋಣೆಗೆ ಹೋದ. ಅವಳು ಹಿಂಬಾಲಿಸಿದಳು. ಮಂಚದ ಮೇಲೆ ಕುಳಿತು ನೋಡಿದ. ಮಧ್ಯಮ ಎತ್ತರ. ತೆಳುವಾದ ಹೊಟ್ಟೆ. ಕಂದುಬಣ್ಣದಲ್ಲಿದ್ದ ಮಟ್ಟಸವಾದ ಮೈಕಟ್ಟು. ಟೀವಿ ಧಾರಾವಾಹಿಗಳಲ್ಲಿ ದಿನಾ ನೋಡುವ ಮದುವೆ ಪ್ರಾಯದ ನಾಯಕಿಯರಂತಾ ಹುಡುಗಿ. ಮೊದಲ ಅನುಭವಕ್ಕೆ ಮೈ ಕಂಪಿಸಿತು. ಅವಳ ತುಟಿಗೆ ತುಟಿಯಿಟ್ಟ. ಅದು ಒಣಗಿತ್ತು. ಮುಖ ಬಿಳುಚಿತ್ತು. ಇವನಿಗೆ ಬ್ರಾ ಹುಕ್ ತೆಗೆಯಲಾಗಲಿಲ್ಲ. ಅವಳೇ ತೆಗೆದಳು. ಒಡ್ಡೊಡೆದು ಹಳ್ಳ ಭೋರ್ಗರೆದು ಹರಿಯಿತು. ಅವಳೆದುರೇ ಮೊಬೈಲಿನಲ್ಲಿದ್ದ ವಿಡಿಯೊ ಅಳಿಸಿದ. 'ಮತ್ತೆಂದೂ ನಿನ್ನನ್ನ ಕೇಳೋದಿಲ್ಲ, ಮಾತಾಡಿಸಲ್ಲ. ನಿಶ್ಚಿಂತೆಯಿಂದಿರು...' ಪ್ರಾಮಾಣಿಕತೆಯಿಂದ ಮಾತು ಕೊಟ್ಟ.

ಪದ್ಮನಾಭ ಸಮಾಜಶಾಸ್ತ್ರದ ಸಂಗಡ ಡ್ರಿಲ್ ಶಿಕ್ಷಕ ಸಹ ಆಗಿದ್ದ. ಮಾತುಕೊಟ್ಟ ಪ್ರಕಾರ ಮಂಜರಿಯ ಸುದ್ದಿಗೆ ಮತ್ತೆ ಹೋಗಲಿಲ್ಲ. ಅದರೆ ಆ ರಾತ್ರಿಯ ಚಿತ್ರ ಮನದ ಭಿತ್ತಿಯಿಂದ ಏನು ಮಾಡಿದರೂ ಮರೆಯಾಗಲಿಲ್ಲ. ಹುಡುಗಿಯರಲ್ಲಿ, ಶಿಕ್ಷಕಿಯರಲ್ಲಿ ಮಂಜರಿಯ ಆ ಚಿತ್ರವೇ ಮೂಡುತ್ತಿತ್ತು. ಛಿ! ಇದೆಲ್ಲ ಮತ್ತೆ ದುರ್ಘಟನೆಗೆ ಕಾರಣವಾದೀತು ಅಂತ ಬಲಪೂರ್ವಕ ಒತ್ತಿಡಲು ಪ್ರಯತ್ನಿಸುತ್ತಿದ್ದ. ಮನೆಯಲ್ಲಿ ಸುಮ್ಮನೆ ಕುಳಿತಾಗ ನಡೆದೆಲ್ಲ ಘಟನೆಗಳು ಮನದಲ್ಲಿ ಮರುಕಳಿಸಿ ಮೈ ಜುಂ ಎನ್ನುತ್ತಿತ್ತು. ಅವಳು ಮಾಡಿದ್ದು, ತಾನು ಸಾಕ್ಷ್ಯ ನಾಶಪಡಿಸಿದ್ದು, ಅವಳನ್ನು ಬಳಸಿಕೊಂಡಿದ್ದು ಎಲ್ಲ ಪ್ರತ್ಯೇಕ ಅಪರಾಧಗಳೆ. ಹಾಗಂತ ತಾನವಳನ್ನು ಬಳಸಿಕೊಂಡಿದ್ದಕ್ಕೆ ಅಪರಾಧಿ ಪ್ರಜ್ಞೆ ಕಾಡುತ್ತಿಲ್ಲ ಎಂಬುದು ಗಮನಕ್ಕೆ ಬಂತು. ಒಂದು ಕ್ರೌರ್ಯಕ್ಕೆ ಮತ್ತೊಂದು ಕ್ರೌರ್ಯ ಸಮರ್ಥನೆಯಾಯ್ತೇ ಅಥವಾ ಒಂದು ಕ್ರೌರ್ಯವೇ ಮತ್ತೊಂದು ಕ್ರೌರ್ಯಕ್ಕೆ ಬೀಜಾರೋಪಣ ಮಾಡಿತೇ? ಆದರೆ ಮೊದಲ ಕ್ರೌರ್ಯ ನಡೆದದ್ದು ತನ್ನ ಮೇಲಲ್ಲವಾಗಿತ್ತು. ಪ್ರತೀಕಾರದ ಪ್ರಶ್ನೆಯೆಲ್ಲಿ ಬಂತು? ಒಳಗೆಲ್ಲೋ ಗುರುಗುಟ್ಟುತ್ತ ಕಾದಿದ್ದ ವಾಂಛೆಯೊಂದಕ್ಕೆ ಸಾಂದರ್ಭಿಕ ಘಟನೆಯೊಂದು ಹಾದಿ ತೋರಿಸಿತು, ಅದೇ ಸತ್ಯ.

ರಾತ್ರಿ ಪರೀಕ್ಷೆಯ ಪೇಪರು ತಿದ್ದುತ್ತಿದ್ದ. ಬಾಗಿಲು ತಟ್ಟಿದ ಸದ್ದಾಯ್ತು. ಗಡಿಯಾರದಲ್ಲಿ ಇನ್ನೇನು ಹನ್ನೊಂದಾಗಲಿತ್ತು. ಈಗ ಯಾರಿರಬಹುದು ಅಂತ ಬಾಗಿಲು ತೆರೆದರೆ ಮಂಜರಿ ಒಳಬಂದು ಬಾಗಿಲು ಹಾಕಿದಳು. ಅನಿರೀಕ್ಷಿತವನ್ನು ಅರಗಿಸಿಕೊಳ್ಳಲಾರದೆ 'ನೀನಾ?...' ಎಂದು ಉದ್ಗರಿಸಿದ್ದಕ್ಕೆ 'ಹೌದು... ನಾನೇರಿ' ಅಂದಳು ನಸುನಗುತ್ತ. ಭಯ ಆತಂಕ ಯಾವುದೂ ಕಾಣಲಿಲ್ಲ. 'ನಾನಿನ್ನು ನಿನ್ನ ಸುದ್ದಿಗೆ ಬರಲ್ಲ ಅಂತಾ ಪ್ರಮಾಣ ಮಾಡಿದ್ನಲ್ಲ. ನಿನ್ನೆದುರೆ ಎಲ್ಲಾ ಅಳಿಸಿಹಾಕಿದ್ದೆ...' ಅಂದ. 'ಹೌದು, ನೀವು ಮಾತು ಕೊಟ್ರಿ. ಈಗ ನಾನಾಗೆ ಬಂದಿದ್ದುರೀ' ಎಂದು ನಸುನಕ್ಕಳು. '... ನೋಡು ಅವತ್ತಿಂದು ನನ್ನ ಮೂಲಸ್ವಭಾವದ್ದಲ್ಲ. ಮಾಡಬಾರದಿತ್ತು.